# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 981 (1160)

ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 07.03.2022

ಉತ್ತರಿಸಬೇಕಾದ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಪ್ರಶ್ನೆ | ಉತ್ತರ |
|---|---|
| ಅ) 1995ರ ನಂತರ ಆರಂಭವಾದ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು 2022ರ ಬಜೆಟ್‌ಗೆ ಇಲಾಖೆಯಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ; ಸಲ್ಲಿಸದ್ದಲ್ಲಿ ಯಾವ ವರ್ಷದವರೆಗಿನ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ; ಸಲ್ಲಿಸದೇ ಇದ್ದಲ್ಲಿ ಕಾರಣವೇನು; (ವಿವರ ಒದಗಿಸುವುದು) | ಇಲ್ಲ,<br>1995ರ ನಂತರ ಆರಂಭವಾದ ಅನುದಾನ ರಹಿತ ಕನ್ನಡ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ ಹಿಂದಿನ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಹಾಲಿ ಸಭಾಪತಿ ರವರ ಸಮ್ಮುಖದಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ, ಸದರಿ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ 1995 ರಿಂದ 2019 ರವರೆಗೆ ಪ್ರತಿ 05 ವರ್ಷದ ಬ್ಲಾಕ್ ಅವಧಿಯಲ್ಲಿ ಪ್ರಾರಂಭಿಸಲಾಗಿರುವ ಶಾಲಾ ಕಾಲೇಜುಗಳೆಷ್ಟು? ಸದರಿ ಶಾಲಾ ಕಾಲೇಜುಗಳಲ್ಲಿ ಎಷ್ಟು ಶಿಕ್ಷಕರು / ಉಪನ್ಯಾಸಕರುಗಳು / ಬೋಧಕೇತರುಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಇವರುಗಳನ್ನು ಅನುದಾನಕ್ಕೆ ಒಳಪಡಿಸಿದ್ದಲ್ಲಿ ವಾರ್ಷಿಕವಾಗಿ ತಗಲುವ ಅಂದಾಜು ವೆಚ್ಚವನ್ನೊಳಗೊಂಡ ವಿವರವಾದ ಕ್ರೋಢೀಕೃತ ಮಾಹಿತಿಯನ್ನು ಪಡೆಯಲು ತೀರ್ಮಾನಿಸಲಾಯಿತು. ಅದರಂತೆ, ಎಲ್ಲಾ ಮೂರು ಆಯುಕ್ತಾಲಯಗಳು ಮತ್ತು ಪದವಿ ಪೂರ್ವ ನಿರ್ದೇಶನಾಲಯದಿಂದ ಮಾಹಿತಿಯನ್ನು ಪಡೆಯಲು ಕ್ರಮವಹಿಸಲಾಗಿರುತ್ತದೆ. |
| ಆ) 1995ರಿಂದ ಇಲ್ಲಿಯವರಿಗೆ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ | 1995ರಿಂದ 2019-20ರ ಅವಧಿಯವರೆಗೆ ಪ್ರಾರಂಭವಾದ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿದಲ್ಲಿ |

<table>
<tr>
<td>ಒಳಪಡಿಸಿದ್ದಲ್ಲಿ ಅದಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು;</td>
<td>ತಗಲಬಹುದಾದ ಅಂದಾಜು (TENTATIVE) ವೆಚ್ಚದ ವಿವರವನ್ನು ಕೆಳಕಂಡಂತೆ ನೀಡಲಾಗಿದೆ. ಪೂರ್ಣ ವೆಚ್ಚದ ವಿವರಗಳನ್ನು ಪಡೆದ ನಂತರ ಪರಿಶೀಲಿಸಲಾಗುತ್ತದೆ.
<table>
<tr><td>ಪ್ರಾಥಮಿಕ ಶಾಲೆಗಳು</td><td>ಹಿರಿಯ ಪ್ರಾಥಮಿಕ ಶಾಲೆಗಳು</td><td>ಪ್ರೌಢ ಶಾಲೆಗಳು</td><td>ಪದವಿ ಪೂರ್ವ ಕಾಲೇಜುಗಳು</td></tr>
<tr><td colspan="3">(ಅಂದಾಜು ಮೊತ್ತ ರೂ ಲಕ್ಷಗಳಲ್ಲಿ)</td><td>(ಅಂದಾಜು ಮೊತ್ತ ರೂ ಕೋಟಿಗಳಲ್ಲಿ)</td></tr>
<tr><td>6412</td><td>8678</td><td>989</td><td>3122</td></tr>
<tr><td>45778.26</td><td>36187.26</td><td>64847.09</td><td>2752.03</td></tr>
</table>
</td>
</tr>
<tr>
<td>ಇ) ಎಷ್ಟು ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲಾಗುವುದು; ಶಾಲಾ, ಕಾಲೇಜುಗಳ ಸಂಖ್ಯೆಯನ್ನು ವರ್ಷವಾರು ಮಾಹಿತಿಯೊಂದಿಗೆ ಒದಗಿಸುವುದು; ಈ 5 ವರ್ಷಗಳ ಬ್ಲಾಕ್ ವಾರು ಕ್ರೂಢೀಕೃತ ಮಾಹಿತಿಯನ್ನು 1995ರಿಂದ ಇಲ್ಲಿಯವರೆಗೆ ಒದಗಿಸುವುದು;</td>
<td rowspan="2">ಉಪ ಪ್ರಶ್ನೆ'ಅ' ಗೆ ನೀಡಲಾದ ಉತ್ತರದನ್ವಯ ಕ್ರಮ ವಹಿಸಲಾಗುತ್ತಿರುವುದರಿಂದ ಅನ್ವಯಿಸುವುದಿಲ್ಲ.</td>
</tr>
<tr>
<td>ಈ) ಅನುದಾನಕ್ಕೆ ಒಳಪಡಿಸಲು ಇರುವ ಸಮಸ್ಯೆಗಳೇನು; ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು; ಸಮಸ್ಯೆ ಬಗೆಹರಿಸಿ 2022ರ ಬಜೆಟ್ ನಲ್ಲಿ ಅನುದಾನಕ್ಕೆ ಒಳಪಡಿಸಲು ಘೋಷಿಸಲಾಗುವುದೇ? (ವಿವರ ನೀಡುವುದು)</td>
</tr>
</table>

ಇಪಿ 60 ಪಿಎಂಸಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು.